

# ಪರೋಪಕಾರ

ಚಿತ್ರ: ಚಂದ್ರ ಹಳೇಮನಿ

■ **ಅನುಪಮ**

ವೃದ್ಧನೊಬ್ಬ ತನ್ನ ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಿತ್ತು. ಆತ ಕಾಲ್ನಡಿಗೆಯಲ್ಲಿ ಪ್ರಯಾಣ ಬೆಳೆಸಿದ್ದ. ನಡೆಯುತ್ತಾ ನಡೆಯುತ್ತಾ ಅವನಿಗೆ ಬಹಳ ಆಯಾಸವಾಯಿತು. ಸೂರ್ಯ ಆಗಲೇ ನೆತ್ತಿಯ ಮೇಲೆ ಬಂದು ಝಳ ಹೆಚ್ಚುತ್ತಾ ಬಂದಿತ್ತು. ಬಿಸಿಲ ತಾಪದ ಸಂಕಟದಲ್ಲಿ ಆತನಿಗೆ ಕಂಡುಂಡ ನೋವು, ಕಷ್ಟಗಳು ಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಹೋದವು. ತಾನು ಅನುಭವಿಸಿದ ಕಷ್ಟವನ್ನು ನೆನೆದು ಭಾರವಾದ ಹೆಜ್ಜೆಗಳನ್ನು ಹಾಕತೊಡಗಿದ. ನೆಲಕ್ಕೆ ಕಾಲು ಊರಿದರೆ ಬರೆ ಎಳೆದಷ್ಟು ಬಿಸಿ ತಾಗುತ್ತಿದೆ. ನೆತ್ತಿಯನ್ನು ಬಿರುಬಿಸಿಲು ಸುಡುತ್ತಿತ್ತು. ದೇಹ ಮುನ್ನಡೆದರೆ ಮನಸು ಹಿಂದೆ ಹಿಂದೆ ಸಾಗುತ್ತಾ ಕಹಿ ನೆನಪುಗಳನ್ನು ಕೆದುಕುತ್ತಿದೆ. ಆಯಾಸ ಇನ್ನೂ ಹೆಚ್ಚಾಗಿ ಕೊಂಚ ವಿಶ್ರಮಿಸಿದರೆ ಸಾಕು ಎಂದು ಅವನ ಜೀವ ಬಯಸುತ್ತಿತ್ತು.

ಅಯ್ಯೋ! ಭಗವಂತಾ ನನ್ನ ದಣಿವಾರಿಸಿಕೊಳ್ಳಲು ದಾರಿಯುದ್ದಕ್ಕೂ ಒಂದೇ ಒಂದು ಮರವೂ ಇಲವಲ್ಲ. ಎಲ್ಲಾದರೂ ಸ್ವಲ್ಪ ನೆರಳಿದ್ದರೆ ಅದರಡಿ ಕುಳಿತು ದಣಿವಾರಿಸಿಕೊಳ್ಳಬಹುದಿತ್ತು ಎಂದು ಹಲುಬುತ್ತಾ ಕಣ್ಣೋಟವನ್ನು ದೂರದವರೆಗೂ ಹಾಯಿಸಿದ. ದೂರದಲ್ಲೆಲ್ಲೋ ಒಂದು ಮರ ಅವನ ಕಣ್ಣಿಗೆ ಬಿತ್ತು. ಒಂದೇ ಉಸಿರಿಗೆ ತನ್ನ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಬೇಗ ಬೇಗ ಹೆಜ್ಜೆ ಹಾಕಿ ಅಂತು ಮರವಿದ್ದ ಜಾಗ ತಲುಪಿ ನಿಟ್ಟುಸಿರುಬಿಟ್ಟ. ಆ ಮರದ ನೆರಳಿನಲ್ಲಿ ಕುಳಿತ. ಅವನಿಗೆ ಮತ್ತೆ ಮತ್ತೆ ತಾನು ಅನುಭವಿಸಿದ ಕಷ್ಟಗಳ ನೆನಪು ಕಾಡ್ತಾನೆ ಇತ್ತು. ಅದೇ ಸಮಯಕ್ಕೆ ಸರಿಯಾಗಿ ಅನಿರೀಕ್ಷಿತ ಧ್ವನಿಯೊಂದು ಕೇಳಿಬಂತು. ಆ ವೃದ್ಧ ತನ್ನ ಸುತ್ತಮುತ್ತ ನೋಡಿದ ಯಾರೂ ಕಾಣಲಿಲ್ಲ. ತಲೆ ಎತ್ತಿ ಮೇಲೆ ನೋಡಿದ ಅವನಿಗೆ ನೆರಳಾಗಿ ನಿಂತಿದ್ದ ವೃಕ್ಷವೇ ಮಾತನಾಡಿದ್ದು ಕಂಡು ಚಕಿತನಾದ.

ಮರ ಅವನಿಗೆ 'ನಿನಗೆ ನನ್ನ ನೆನಪಿದೆಯೇ? ಎಂದು ಕೇಳಿತು. ಅದಕ್ಕವನು ಯೋಚಿಸಿದ. ಇಲ್ಲ, ನನಗೆ ನಿನ್ನ ನೆನಪಿಲ್ಲ ಎಂದ.

ಮರ ನನ್ನ ನೆನಪು ನಿನಗೆ ಹೇಗೆ ಇರಲು ಸಾಧ್ಯ ಹೇಳು? ಹಲವು ವರ್ಷಗಳ ಹಿಂದೆ ನೀನೇ ಕಡಿದು ಬಿಟ್ಟ ಮರದ ಬೊಡ್ಡೆಯಲ್ಲವೇ ನಾನು ಎಂದಿತು.!

ಇದ್ದರೂ ಇರಬಹುದು. ಆದರೆ ಮತ್ತೆ ಹೇಗೆ ನೀನು ಬೆಳೆದು ನಿಂತೆ? ಎಂದು ವೃದ್ಧ ತನ್ನ ಅಚ್ಚರಿಯನ್ನು ವ್ಯಕ್ತಪಡಿಸಿದ.

ನಿನ್ನ ಕೊಡಲಿಯೇಟು ಬಿದ್ದ ಕಡೆಯಿಂದಲೇ ನಾನು ಮತ್ತೆ ಚಿಗುರೊಡೆದು ಬೆಳೆದು ನಿಂತಿದ್ದೇನೆ. ಕೊಡಲಿಯೇಟು ಬಿತ್ತೆಂದು ಎದೆಗುಂದಲಿಲ್ಲ. ಹಟದಿಂದ ಅಲ್ಲಿಂದಲೇ ಮರುಹುಟ್ಟನ್ನು ಪಡೆದಿದ್ದೇನೆ. ಇದು ನನ್ನ ಅಂತಃಶಕ್ತಿ! ಆದರೆ, ಇಂದು ನೀನು ಈಗ ನನ್ನ ಕೆಳಗೆ ನಿಂತು ನಿನ್ನ ಕಷ್ಟಗಳನ್ನು ತೋಡಿಕೊಂಡು ಸಮಾಧಾನ ತೆಗೆದುಕೊಳ್ಳುತ್ತಿದ್ದೀಯಾ ಎಂತಹ ವಿಪರ್ಯಾಸವಲ್ಲವೇ? ಎಂಬ ಪ್ರಶ್ನೆಯನ್ನು ಇಟ್ಟ ಮರ ತನ್ನ ಬದುಕಿನ ಪರೋಪಕಾರದ ಸಾರ್ಥಕತೆಯನ್ನು ಹೇಳಿತು. ದಣಿದು ಬಂದವರಿಗೆ ನೆರಳು ನೀಡುತ್ತೇನೆ. ಪಕ್ಷಿಗಳಿಗೆ ಆಶ್ರಯ ನೀಡಿದ್ದೇನೆ. ಹಸಿದವರಿಗೆ ಹಣ್ಣು ನೀಡಿದ್ದೇನೆ. ನನ್ನ ಸುತ್ತಲೂ ತಂಪನೆಯ ವಾತಾವರಣ ಇದ್ದು ಶುದ್ಧವಾಗಿದೆ.

ನಿನ್ನಂತ ಸ್ವಾರ್ಥಿಗಳು ನಮ್ಮಂತಹ ಮರಗಳ ಜೀವತೆಗೆದು ಉರುಳಿಸಿ ಸೌದೆಯಾಗಿಸುತ್ತೀರಿ, ನಿಮ್ಮ ಮನೆಗೆ ಬಾಗಿಲಾಗಿ, ಮಣೆಯಾಗಿ, ಮೇಜಾಗಿ, ಲಟ್ಟಣಿಗೆ... ಹೀಗೆ ಏನೆಲ್ಲಾ ಮಾಡಿಕೊಳ್ಳುತ್ತೀರಿ. ನೀವು ಯಾರಿಗೆ ಒಳಿತನ್ನು ಮಾಡಿದ್ದೀರಿ. ಇದ್ದಾಗ ಕೊನೆ ಪಕ್ಷ ಸತ್ತಾಗ ಸ್ವಲ್ಪ ಯೋಚಿಸಿ ಹೇಳು ಎಂದಿತು.

ಎಲೆ ವೃಕ್ಷವೇ! ನಿನ್ನ ಮಾತು ಸತ್ಯ. ಅಂದು ನಾನು ನಿನ್ನನ್ನು ಕಡಿದರೂ ಇಂದು ನನಗೆ ನೆರಳಾಗಿ ಆಶ್ರಯ ನೀಡಿದ್ದೀಯಾ. ಸ್ವಲ್ಪ ಹೊತ್ತಿನ ಮುಂಚೆ ನಿನ್ನನ್ನು ಕತ್ತರಿಸಿದರೆ ಎಷ್ಟು ಹಣ ಸಿಕ್ಕೀತು ಎಂದು ಲೆಕ್ಕಾಚಾರ ಮಾಡುತ್ತಿದ್ದೆ ಎಂದನಾತ.

ನೀನು ಏನೇ ಹಳಿದರೂ ಮನುಷ್ಯನಾದ ನೀನು ಎಂದಿಗೂ ಬದಲಾಗಲಾರೆ ಎಂದೇ ನನಗೀಗ ಅನ್ನಿಸುತ್ತಿದೆ. ಸ್ವಾರ್ಥ ಚಿಂತನೆಯಿಂದ ಆಕ್ಷಣಕ್ಕೆ ಜಯವನ್ನು ಸಾಧಿಸಬಹುದೇ ಹೊರತು ಶಾಶ್ವತವಾಗಿ ಅಲ್ಲ. ಸೃಷ್ಟಿಯ ಸಕಲ ಜೀವಿಗಳು ಪರೋಪಕಾರಿಗಳಾಗಿಯೇ ಬದುಕುತ್ತವೆ. ನೀನು ಆ ಜೀವರಾಶಿಯಲ್ಲಿ ಒಬ್ಬನಾಗಿ ಉಳಿದ ಎಲ್ಲ ಸಹಜೀವಿಗಳಿಗೆ ಎರವಾಗದೆ ನೆರವಾಗಿ ಬದುಕುವುದನ್ನು ಕಲಿ ಎಂದು ನಾನು ಆಶಿಸುತ್ತೇನೆ.

ನನ್ನ ಬಗ್ಗೆ ನನಗೆ ಅಸಹ್ಯ ಅನ್ನಿಸಿತ್ತಿದೆ. ನಿನಗೆ ಕೈ ಮುಗಿದು ಬೇಡುವೆ ಕ್ಷಮಿಸು. ಇನ್ನು ಮುಂದೆ ಹೀಗೆ ಎಂದೂ ಯೋಚಿಸುವುದಿಲ್ಲ ಎಂದು ಆ ವೃದ್ಧ ಬೇಡಿಕೊಂಡ. ■